ಸುವರ್ಣ ಸಂಭ್ರಮ

ಇಡೀ ದೇಶದಲ್ಲಿ ಯಾವುದಾದರೂ ನಾಡಿನ ಜನರು ತಮ್ಮ ರಾಜ್ಯೋತ್ಸವವನ್ನು ಅತಿದೊಡ್ಡ ನಾಡಹಬ್ಬವಾಗಿ, ನಾಡಿನ ಮೂಲೆಮೂಲೆಗಳಲ್ಲೂ ವ್ಯಾಪಕವಾಗಿ ಆಚರಿಸುತ್ತಿದ್ದಾರೆ ಎಂದರೆ ಅದು ಕನ್ನಡಿಗರು ಮಾತ್ರ. ಹಾಗೇ ಯಾವುದಾದರೂ ನಾಡಿನ ಜನರು ತಮ್ಮದೇ ನೆಲದಲ್ಲಿ ತಮ್ಮ ಭಾಷಿಕ ಹಕ್ಕುಗಳಿಗಾಗಿ ದನಿ ಎತ್ತಿ ಚಳವಳಿ ಮಾಡುತ್ತಿದ್ದಾರೆಂದರೆ ಅದೂ ಕೂಡಾ ಕನ್ನಡಿಗರು ಮಾತ್ರವೇ! ಕನ್ನಡನಾಡಿಗೆ ಮಾತ್ರ ಸೀಮಿತವಾದ ಈ ವಿಶೇಷಕ್ಕೆ, ವೈಚಿತ್ರ್ಯಕ್ಕೆ ಕಾರಣ ಇದೆ. ಒಂದರ್ಥದಲ್ಲಿ, ಸಾವಿರಾರು ವರ್ಷಗಳ ಕಾಲ ಭೂಪಟದಲ್ಲಿ ಮೆರೆದ ಒಂದು 'ನುಡಿ ಸಮುದಾಯ' ತನ್ನದೇ ನೆಲದಲ್ಲಿ ಹಿಂದಕ್ಕೆ ದೂಡಿಸಿಕೊಂಡಾಗ, ಅತಂತ್ರ ಸ್ಥಿತಿಗೆ ತಲುಪಿದಾಗ ಸಹಜವಾಗಿ ನಡೆಸುತ್ತಿರುವ ಸೆಣಸಾಟವಾಗಿ ನಾವು ಕನ್ನಡ ಚಳವಳಿಯನ್ನು ಗುರುತಿಸಬಹುದು.

ಕರ್ನಾಟಕದಲ್ಲಿ ನುಡಿಕೇಂದ್ರಿತ ಜನಾಂದೋಲನಕ್ಕೆ ನೂರಾರು ವರ್ಷಗಳ ಇತಿಹಾಸ ಇದೆ. 1565ರ ಜನವರಿ 23ರ ತಾಳಿಕೋಟೆ ಯುದ್ಧದ ಮಹಾಪತನವು ಕನ್ನಡಿಗರ ಆತ್ಮಾಭಿಮಾನಕ್ಕೆ ಮಾಡಿದ ಗಾಸಿ ದೊಡ್ಡದು. ಅಂದಿನಿಂದಲೇ ಪರಭಾಷಿಕರ ಆಳ್ವಿಕೆಗೆ ತುತ್ತಾಗಿ ಕನ್ನಡದ ಬಳಕೆ ಅಡುಗೆಮನೆಗೆ ಸೀಮಿತವಾಗುವಂಥ ಸ್ಥಿತಿ ತಲೆದೋರಿತು. ಬಹುಶಃ, ಇದೇ ಕನ್ನಡಿಗರಲ್ಲಿ ಇಂದಿಗೂ ಬೇರೂರಿರುವ ಆಳವಾದ ಕೀಳರಿಮೆಗೆ, ಗೂಡು ಸೇರಿಕೊಂಡು ಬೆಚ್ಚಗೆ ಕೂಡುವ ಮನಸ್ಥಿತಿಗೆ, ಉದ್ಯಮಶೀಲತೆಯ ಕೊರತೆಗೆ, ರಾಜಕೀಯ ಹಿನ್ನಡೆಗೆ ಕಾರಣವಾಗಿದೆ ಎನ್ನಬಹುದು. ಇವುಗಳನ್ನು ಮೀರುವ ಯತ್ನವಾಗಿ ಕನ್ನಡ ಚಳವಳಿ ಕಾಲಕಾಲಕ್ಕೆ ಕನ್ನಡತನವನ್ನು ಬಡಿದೆಚ್ಚರಿಸುವ ಕೆಲಸ ಮಾಡಿಕೊಂಡು ಬಂದಿದೆ.

## ಸ್ವಾತಂತ್ರ್ಯಕ್ಕೆ ಮೊದಲು; ಏಕೀಕರಣದವರೆಗೆ...

ಬಂಗಾಲ ವಿಭಜನೆಯ ನಂತರ ನಮ್ಮ ಕನ್ನಡನಾಡಿನಲ್ಲಿ ಹುಟ್ಟಿಕೊಂಡ ಜಾಗೃತಿಯ ಫಲವಾಗಿ, 19 ಭಾಗಗಳಲ್ಲಿ ಹರಿದು ಹಂಚಿಹೋಗಿದ್ದ ಕನ್ನಡ ಭಾಷಿಕ ಪ್ರದೇಶಗಳನ್ನು ಒಗ್ಗೂಡಿಸಿ ಒಂದು ಆಳ್ವಿಕೆಯ ಪ್ರದೇಶವನ್ನಾಗಿಸಬೇಕೆನ್ನುವ ಮಹತ್ವಾಕಾಂಕ್ಷೆಯ 'ಕರ್ನಾಟಕ ಏಕೀಕರಣ ಚಳವಳಿ' ಚುರುಕಾಯಿತು. ಅಂದಿನ ಕಾಲಮಾನದಲ್ಲಿ ಆಲೂರು ವೆಂಕಟರಾಯರು ಇಂತಹ ಚಳವಳಿಗೆ ತಮ್ಮ ಬರಹಗಳ ಮೂಲಕ, ಪತ್ರಿಕೆ–ಪುಸ್ತಕಗಳ ಮೂಲಕ ಬಹುದೊಡ್ಡ ಪ್ರೇರಣೆ ನೀಡಿದ್ದರು. ಅಪಾರವಾದ ಓಡಾಟ, ಹುಡುಕಾಟ, ಸಂಶೋಧನೆಗಳ ಮೂಲಕ ಕನ್ನಡದ ನಿನ್ನೆಗಳನ್ನು 'ಕರ್ನಾಟಕ ಗತವೈಭವ' ಎನ್ನುವ ಪುಸ್ತಕದಲ್ಲಿ ಕಟ್ಟಿಕೊಟ್ಟರು. 1920ರಲ್ಲಿ ಹೊರಬಂದ ಈ ಪುಸ್ತಕವು ಉಂಟುಮಾಡಿದ ಪರಿಣಾಮಗಳ, ಬೀರಿದ ಪ್ರಭಾವಗಳ ಕಾರಣದಿಂದ ಕರ್ನಾಟಕ ಏಕೀಕರಣ ಚಳವಳಿಯು ಒಂದು ದೊಡ್ಡ ಯಶಸ್ವಿ ಜನಾಂದೋಲನವಾಯಿತೆಂದರೆ ತಪ್ಪಾಗಲಾರದು.



ಕನ್ನಡ ಚಳವಳಿಯ ತ್ರಿಮೂರ್ತಿಗಳು: ಅ.ನ.ಕೃ., ಮ. ರಾಮಮೂರ್ತಿ ಹಾಗೂ ಎಂ. ಚಿದಾನಂದ ಮೂರ್ತಿ



ಗೋಕಾಕ್ ಚಳವಳಿಗೆ ಶಕ್ತಿ ಹಾಗೂ ರಂಗು ತುಂಬಿದ ರಾಜ್‌ಕುಮಾರ್ ನೇತೃತ್ವದ ಕನ್ನಡ ಸಿನಿಮಾ ಕಲಾವಿದರು

